SCCH – 01
MVC No.4671/2021
RW1

**BEFORE THE MOTOR ACCIDENT CLAIMS TRIBUNAL, CHIEF JUDGE, COURT OF SMALL CAUSES JUDGE, BENGALURU.**

**MVC.NO.4671/2021**

**R.W-1**

| | |
|---|---|
| Name | Dr. Pallavi.K.L |
| Husband's name | Dr. Sharana Basava |
| Age | 35 years |
| Occupation | Gynecologist |
| Residence | Magadi. |

**ಸಾಕ್ಷಿಗೆ ದಿನಾಂಕಃ 10.06.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ಶ್ರೀ.ಕೆಪಿ ವಕೀಲರಿಂದಃ**

1. ಮಾಗಡಿಯಲ್ಲಿ ಇರುವ ಸಾರ್ವಜನಿಕ ಆಸ್ಪತ್ರೆಯಲ್ಲಿ ನಾನು ಕಳೆದ 4 ವರ್ಷಗಳಿಂದ ಕರ್ತವ್ಯ ಮಾಡುತ್ತಾ ಇದ್ದೇನೆ.

2. ಕೆಲವು ದಾಖಲೆಗಳನ್ನು ಹಾಜರುಪಡಿಸಬೇಕು ಎಂದು ಈ ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು. ಸದರಿ ದಾಖಲೆಗಳನ್ನು ನಾನು ತೆಗೆದುಕೊಂಡು ಬಂದಿದ್ದೇನೆ.

3. ಸೂಚನೆಃ ಈ ಸಾಕ್ಷಿದಾರರು ಸಾರ್ವಜನಿಕ ಆಸ್ಪತ್ರೆ, ಮಾಗಡಿಯಲ್ಲಿ ಇಟ್ಟಿರುವಂತಹ ಎಂ.ಎಲ್.ಸಿ ರಿಜಿಸ್ಟರ್ ಎಂಬ ತಲೆ ಬರಹ ಇರುವ ಮೂಲ ರಿಜಿಸ್ಟರ್ ಅನ್ನು ಮತ್ತು ಆರಕ್ಷಕ ವಿಷಯ ಸೂಚಿ ವಹಿ ಎಂಬ ತಲೆ ಬರಹ ಇರುವ ರಿಜಿಸ್ಟರ್ ಅನ್ನು ಮತ್ತು ಇದೇ ದಾಖಲೆಗಳ ಫೋಟೋ ಪ್ರತಿಗಳನ್ನು ಹಾಜರುಪಡಿಸಿದ್ದಾರೆ.

4. ಸಾಕ್ಷಿದಾರರು ಮುಂದುವರೆದು ತಮ್ಮ ಆಸ್ಪತ್ರೆಯ ದೈನಂದಿನ ಉಪಯೋಗಕ್ಕೆ ಮೇಲೆ ಹೇಳಿದಂತಹ ರಿಜಿಸ್ಟರ್ ಗಳು ಬೇಕಾಗಿವೆ ಎಂಬುದಾಗಿ ನುಡಿದಿದ್ದಾರೆ.

5. ಸದರಿ ಮೂಲ ಪ್ರತಿಗಳನ್ನು ಮತ್ತು ಫೋಟೋ ಪ್ರತಿಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟು ಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಗಳನ್ನು ತೆಗೆದಿದ್ದಾರೆ ಎಂದು ಕಂಡು ಬರುತ್ತದೆ, ಮತ್ತು ಇದರ ಜೊತೆಗೆ ಅರ್ಜಿದಾರರ ಪರ ವಕೀಲರಾದ ಶ್ರೀ.ಸಿಎಂಜಿ ರವರು ಹಾಜರಿದ್ದಾರೆ ಮತ್ತು ಸದರಿ ವಕೀಲರು ಈ ಫೋಟೋ ಪ್ರತಿಗಳನ್ನು ಮತ್ತು ಮೂಲ ದಾಖಲೆಗಳನ್ನು ಹೋಲಿಕೆ ಮಾಡಿ ನೋಡಿ ನಂತರ ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಗಳನ್ನು ನಿಶಾನೆಯನ್ನಾಗಿ ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

6. ಸದರಿ ಎಂಎಲ್ ಸಿ ರಿಜಿಸ್ಟರ್ ನಕಲನ್ನು ನಿ.ಆರ್.1 ಎಂದು ಮತ್ತು ತುರ್ತು ಚಿಕಿತ್ಸಾ ವಿಭಾಗದ ನಕಲನ್ನು ನಿ.ಆರ್.2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ.ಸಿಎಂಜಿ ವಕೀಲರಿಂದ:**

1) ಗಾಯಾಳುವಿನ ಜೊತೆ ಹಲವಾರು ಜನರು ನಮ್ಮ ಆಸ್ಪತ್ರೆಗೆ ಬಂದಿದ್ದರು ಎಂದರೆ ನನಗೆ ಹೇಳಲು ನೆನಪಿಲ್ಲ. ಸಾಕ್ಷಿಯು ಮುಂದುವರೆದು "ಗಾಯಾಳುವಿನ ಜೊತೆಯಲ್ಲಿ ಓರ್ವ ಸಂಪತ್ ಕುಮಾರ್ ಎಂಬ ವ್ಯಕ್ತಿ ಬಂದಿದ್ದರು" ಎಂದು ನುಡಿದಿದ್ದಾರೆ.

2) ಗಾಯಾಳುವಿನ ಜೊತೆಯಲ್ಲಿ 4 – 5 ಜನರು ಬಂದಿದ್ದರು ಮತ್ತು ಆ ಗಾಯಾಳು ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದಾನೆ ಎಂಬುದಾಗಿ ಸದರಿ 4 – 5 ಜನರು ನನಗೆ ಹೇಳಿದರು ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು "ಮೇಲೆ ಹೇಳಿದ

ಸಂಪತ್ ಕುಮಾರ್ ರವರು ಆ ಮಾಹಿತಿಯನ್ನು ನಮಗೆ ಹೇಳಿದರು" ಎಂದು ನುಡಿದಿದ್ದಾರೆ.

3) ಸದರಿ ಗಾಯಾಳುವನ್ನು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದ ಸಮಯದಲ್ಲಿ ಆ ಗಾಯಾಳುವು ಅರೆ ಪ್ರಜ್ಞಾವಸ್ಥೆಯಲ್ಲಿ {Semi conscious) ಇದ್ದನು.

4) ನಾನು ಹೇಳಿದ ಹಾಗೆ ಸಂಪತ್ ಕುಮಾರ್ ರವರು ನಮ್ಮ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಮತ್ತು ಈ ಸಂಬಂಧವಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.